665205

ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 173(310)
ಸದಸ್ಯರ ಹೆಸರು	: ಶ್ರೀ ಸೂರಜ್ ರೇವಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	: 17.02.2022
ಉತ್ತರಿಸುವ ಸಚಿವರು	: ಮಾನ್ಯ ಮುಖ್ಯಮಂತ್ರಿಯವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ)	ಕಳೆದ 03 ವರ್ಷಗಳಲ್ಲಿ ರಾಜ್ಯದಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ವ್ಯಾಪ್ತಿಗೆ ಸೇರಿದ ಹಲವಾರು ಇಲಾಖೆಗಳ ಅಧಿಕಾರಿಗಳ ಮೇಲೆ ಲೋಕಾಯುಕ್ತ ಹಾಗೂ ಎ.ಸಿ.ಬಿಯಿಂದ ದಾಳಿಗೊಳಗಾಗಿರುವ ಪ್ರಕರಣಗಳು ಎಷ್ಟು; (ಸಂಪೂರ್ಣ ಮಾಹಿತಿ ನೀಡುವುದು).	ಕಳೆದ 03 ವರ್ಷಗಳಲ್ಲಿ ಸಿಆಸು ಇಲಾಖೆಯ ವ್ಯಾಪ್ತಿಗೆ ಸೇರಿದ ಅಧಿಕಾರಿಗಳ ಮೇಲೆ ದಾಳಿಗೊಳಗಾದ ಪ್ರಕರಣಗಳ ಸಂಖ್ಯೆ ಈ ಕೆಳಕಂಡಂತಿದೆ: ಲೋಕಾಯುಕ್ತ ಪ್ರಕರಣಗಳು: ಇಲ್ಲ ಎ.ಸಿ.ಬಿ. ಪ್ರಕರಣಗಳ ಸಂಖ್ಯೆ: 11 (ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.)
ಆ)	ಕಳೆದ 03 ವರ್ಷಗಳಲ್ಲಿ ಸದರಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ವ್ಯಾಪ್ತಿಗೆ ಸೇರಿದ ಹಲವಾರು ಇಲಾಖೆಗಳ ಅಧಿಕಾರಿಗಳ ಮೇಲೆ ಲೋಕಾಯುಕ್ತ ಹಾಗೂ ಎ.ಸಿ.ಬಿಯಿಂದ ದಾಳಿಗೊಳಗಾದ ಪ್ರಕರಣಗಳಿಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ಕೈಗೊಂಡ ಕ್ರಮಗಳೇನು;(ಸಂಪೂರ್ಣ ಮಾಹಿತಿ ನೀಡುವುದು).	ದಾಳಿಗೊಳಗಾದ ಪ್ರಕರಣಗಳ ಕುರಿತು ಸರ್ಕಾರದಿಂದ ಕ್ರಮ ಕೈಗೊಂಡಿರುವ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.
ಇ)	ಕಳೆದ 03 ವರ್ಷಗಳಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ವ್ಯಾಪ್ತಿಗೆ ಸೇರಿದ ಹಲವಾರು ಇಲಾಖೆಗಳ ಅಧಿಕಾರಿಗಳು ಸರ್ಕಾರದ ಪೂರ್ವಾನುಮತಿ ಪಡೆಯದೇ ಹಲವಾರು ಬಾರಿ ವಿದೇಶ ಪ್ರವಾಸ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಸದರಿ ಅಧಿಕಾರಿಗಳ ವಿರುದ್ಧ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಅಧಿಕಾರಿಗಳು ಯಾವುದೇ ಕ್ರಮ ಕೈಗೊಳ್ಳದೇ ತಪ್ಪಿತಸ್ಥ ಅಧಿಕಾರಿಗಳ ಜೊತೆ	ಈ ಕೆಳಕಂಡ ಕೆ.ಎ.ಎಸ್. ಅಧಿಕಾರಿಗಳು ಪೂರ್ವಾನುಮತಿ ಪಡೆಯದೇ ವಿದೇಶ ಪ್ರವಾಸ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಶ್ರೀ ಅಭಿಜಿನ್. ಬಿ. ಕೆ.ಎ.ಎಸ್ (ಕಿರಿಯ ಶ್ರೇಣಿ) ಅಧಿಕಾರಿ ಇವರು ಶ್ರೀಲಂಕಾ ದೇಶಕ್ಕೆ ಪ್ರವಾಸ ಕೈಗೊಳ್ಳಲು ಸರ್ಕಾರದ ಅನುಮತಿ ಕೋರಿದ್ದು, ಸದರಿ ಪ್ರಸ್ತಾವನೆಯು ಪರಿಶೀಲನೆಯಲ್ಲಿರುವಾಗಲೇ ಪ್ರವಾಸ ಕೈಗೊಂಡ ಕಾರಣ ಸದರಿಯವರ ವಿರುದ್ಧ ಕ.ನಾ.ಸೇ(ಸಿಸಿಎ)ನಿಯಮ 12ರಡಿ ಇಲಾಖಾ ವಿಚಾರಣೆ ನಡೆಸಲಾಗಿತ್ತು. ಆರೋಪಿತರು ಲಿಖಿತ ಹೇಳಿಕೆಯಲ್ಲಿ

	ಶಾಮೀಲಾಗಿರುವುದು ನಿಜವೇ; (ಸಂಪೂರ್ಣ ಮಾಹಿತಿ ನೀಡುವುದು)	ಸರ್ಕಾರದ ಅನುಮತಿ ದೊರತಿದೆ ಎಂದು ಭಾವಿಸಿ ಪ್ರವಾಸಕ್ಕೆ ಹೋಗಿದ್ದು, ಅನುಮತಿ ದೊರೆಯದ ಕಾರಣ ಕೂಡಲೇ ಹಿಂದಿರುಗಿರುವುದಾಗಿ ತಿಳಿಸಿರುತ್ತಾರೆ. ಸದರಿಯವರ ಹೇಳಿಕೆಯನ್ನು ಪರಿಶೀಲಿಸಿ, ಆರೋಪಿತರಿಗೆ ದಿನಾಂಕ: 06.01.2020ರ ಆದೇಶದಲ್ಲಿ ಆಡಳಿತಾತ್ಮಕ ಎಚ್ಚರಿಕೆ ನೀಡಲಾಗಿದೆ. ಶ್ರೀಮತಿ ಶೈಲಜಾ. ವಿ.ಆರ್. ಕೆ.ಎ.ಎಸ್ (ಹಿರಿಯ ಶ್ರೇಣಿ) ಅಧಿಕಾರಿ ಇವರು ಸರ್ಕಾರದ ಅನುಮತಿ ಪಡೆಯದೆ ದುಬೈಗೆ ವಿದೇಶ ಪ್ರವಾಸ ಕೈಗೊಂಡಿರುತ್ತಾರೆ ಎಂಬ ಬಗ್ಗೆ ಶ್ರೀ ಕೆ.ಆರ್. ರವೀಂದ್ರ ಬಿನ್ ಲೇಟ್ ಸಿ.ರಾಮಯ್ಯ, ಕಲ್ಲಹಳ್ಳಿ, ಮಂಡ್ಯ ಇವರಿಂದ ದೂರು ಸ್ವೀಕೃತವಾಗಿದ್ದು ಸದರಿ ದೂರಿನ ಬಗ್ಗೆ ಜಿಲ್ಲಾಧಿಕಾರಿ ಮಂಡ್ಯ ಇವರಿಂದ ವರದಿ ಪಡೆಯಲಾಗಿದ್ದು, ಸದರಿಯವರು ಯಾವುದೇ ವಿದೇಶ ಪ್ರವಾಸ ಮಾಡಿರುವುದಿಲ್ಲವೆಂದು ವರದಿ ಮಾಡಿರುವುದರಿಂದ ಪ್ರಕರಣ ಮುಕ್ತಾಯಗೊಳಿಸಲಾಗಿದೆ. ತಪ್ಪಿತಸ್ಥ ಅಧಿಕಾರಿಗಳ ಜೊತೆ ಶಾಮೀಲಾಗಿರುವ ಯಾವುದೇ ಪ್ರಕರಣಗಳು ಇರುವುದಿಲ್ಲ.
ಈ)	ಕಳೆದ 03 ವರ್ಷಗಳಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ವ್ಯಾಪ್ತಿಗೆ ಸೇರಿದ ಹಲವಾರು ಇಲಾಖೆಗಳ ಅಧಿಕಾರಿಗಳು ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳದಿರುವುದು ಹಾಗೂ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಅಧಿಕಾರಿಗಳು ಕಡತವನ್ನು ಮುಚ್ಚಿಟ್ಟಿರುವ ಪ್ರಕರಣಗಳೇಷ್ಟು; (ಸಂಪೂರ್ಣ ಮಾಹಿತಿ ನೀಡುವುದು)	ಅಂತಹ ಯಾವುದೇ ಪ್ರಕರಣಗಳು ಇರುವುದಿಲ್ಲ.
ಉ)	ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಪ್ರತಿ ತಿಂಗಳು ನಡೆಸುತ್ತಿರುವ ಎಂ.ಎಂ.ಆರ್ ಸಭೆಗಳಲ್ಲಿ ಈ ಪ್ರಕರಣಗಳ ವಿಚಾರಣೆ, ಪ್ರಗತಿ ಮತ್ತು ವಿಲೇವಾರಿ ಬಗ್ಗೆ ಕೈಗೊಂಡಿರುವ ಕ್ರಮಗಳೇನು; (ಸಂಪೂರ್ಣ ಮಾಹಿತಿ ನೀಡುವುದು).	ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿನ ಪರಿಶೀಲನಾ ಸಭೆಯಲ್ಲಿ ಪ್ರತಿ ತಿಂಗಳು ಪ್ರಗತಿ ಮತ್ತು ವಿಲೇವಾರಿ ಬಗ್ಗೆ ಪರಿಶೀಲಿಸಲಾಗುತ್ತಿದೆ. ಅಂತೆಯೇ ಸರ್ಕಾರದ ಕಾರ್ಯದರ್ಶಿ, ಸಿಆಸು ಇಲಾಖೆರವರ ಹಂತದಲ್ಲಿಯೂ ಸಹ ಮಾಹೆಯಾನ ಈ ಕುರಿತಂತೆ ಪ್ರಗತಿ ಮತ್ತು ವಿಲೇವಾರಿಯ ಬಗ್ಗೆ ಪರಿಶೀಲಿಸಲಾಗುತ್ತಿದೆ.
ಊ)	ಕೆಲವು ಪ್ರಕರಣಗಳಲ್ಲಿ ಕಾನೂನು	ಅಂತಹ ಯಾವುದೇ ಪ್ರಕರಣಗಳು ಇರುವುದಿಲ್ಲ.

	ಇಲಾಖೆಯಿಂದ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಲು ಅಭಿಪ್ರಾಯ ನೀಡಿದ್ದರೂ ಸಹ ಅಂತಹ ಪ್ರಕರಣಗಳಲ್ಲಿ ಯಾವುದೇ ಕ್ರಮ ಜರುಗಿಸದೆ ಇರಲು ಕಾರಣವೇನು;	
ಋ)	ಕೆಲವೊಂದು ಪ್ರಕರಣಗಳಲ್ಲಿ ಕಾನೂನು ಇಲಾಖೆಯ ಮೇಲೆ ಒತ್ತಾಯ/ಪ್ರಭಾವ ಬೀರಿ ಅಧಿಕಾರಿಗಳಿಗೆ ಅನುಕೂಲವಾಗುವ ರೀತಿಯಲ್ಲಿ ಅಭಿಪ್ರಾಯ ಪಡೆದಿರುವ ಪ್ರಕರಣಗಳೆಷ್ಟು? (ಸಂಪೂರ್ಣ ಮಾಹಿತಿ ನೀಡುವುದು)	ಅಂತಹ ಯಾವುದೇ ಪ್ರಕರಣಗಳು ಇರುವುದಿಲ್ಲ

ಸಂಖ್ಯೆ: ಡಿಪಿಎಆರ್ 25 ಎಸ್‌ಎಂಎಸ್ 2022

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ

ಅನುಬಂಧ
ಭ್ರಷ್ಟಾಚಾರ ನಿಗ್ರಹ ದಳ ದಾಳಿಗೆ ಒಳಪಟ್ಟ ಅಧಿಕಾರಿಗಳ ವಿವರಗಳು

ಕ್ರಮ ಸಂಖ್ಯೆ	ಅಧಿಕಾರಿಯ ಹೆಸರು ಮತ್ತು ಕಡತ ಸಂಖ್ಯೆ	ಪ್ರಕರಣದ ವಿವರಗಳು	ಅಮಾನತ್ತು ಪಡಿಸಿದ ದಿನಾಂಕ	ಸೇವೆಗೆ ಪುನರ್ ಸ್ಥಾಪಿಸಿದ ದಿನಾಂಕ	ಪ್ರಸ್ತುತ ಹಂತ
1.	ಶ್ರೀ ಬಿ.ಟಿ.ಕುಮಾರಸ್ವಾಮಿ, ಕೆ.ಎ.ಎಸ್(ಕಿ.ಶ್ರೇ) ಅಧಿಕಾರಿ, ಸಿಆಸುಇ 10 ಕೆಇವಿ 2020	ಅಧಿಕಾರಿಯು ಉಪವಿಭಾಗಾಧಿಕಾರಿ ಕಂದಾಯ ವಿಭಾಗ, ಬಳ್ಳಾರಿ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಆದಾಯಕ್ಕಿಂತ ಹೆಚ್ಚಿನ ಆಸ್ತಿ ಹೊಂದಿರುವ ಆರೋಪದ ಮೇಲೆ ದಿನಾಂಕ:04.01.2018 ರಂದು ಎಸಿಬಿ ಚಿತ್ರದುರ್ಗ ಠಾಣೆಯಲ್ಲಿ ಮೊ.ಸಂ.01/2018 ಅನ್ನು ದಾಖಲಿಸಿ ಸದರಿಯವರ ಕಛೇರಿ ಮತ್ತು ವಾಸದ ಮನೆಗಳನ್ನು ಶೋಧ ನಡೆಸಿದ ಪ್ರಕರಣ.	24.03.2018	03.07.2018	ಎಸಿಬಿಯಲ್ಲಿ ತನಿಖೆ ಬಾಕಿ ಇರುತ್ತದೆ.
2.	ಶ್ರೀ ತಿಪ್ಪೇಸ್ವಾಮಿ.ಎನ್ ಕೆ.ಎ.ಎಸ್(ಕಿ.ಶ್ರೇ) ಅಧಿಕಾರಿ, ಸಿಆಸುಇ 51 ಕೆಇವಿ 2018	ಅಧಿಕಾರಿಯು ಉಪವಿಬಾಗಾಧಿಕಾರಿ ಕಂದಾಯ ವಿಭಾಗ, ತುಮಕೂರು ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಆದಾಯಕ್ಕಿಂತ ಹೆಚ್ಚಿನ ಆಸ್ತಿ ಹೊಂದಿರುವ ಆರೋಪದ ಮೇಲೆ ದಿನಾಂಕ:19.03.2018 ರಂದು ಎಸಿಬಿ ಚಿತ್ರದುರ್ಗ ಠಾಣೆಯಲ್ಲಿ ಮೊ.ಸಂ.03/2018 ಅನ್ನು ದಾಖಲಿಸಿ ಸದರಿಯವರ ಕಛೇರಿ ಮತ್ತು ವಾಸದ ಮನೆಗಳನ್ನು ಶೋಧ ನಡೆಸಿದ ಪ್ರಕರಣ.	ಸದರಿ ಪ್ರಕರಣ ಸಂಬಂಧ ಮಾನ್ಯ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿತ್ರದುರ್ಗ ಇಲ್ಲಿ 'ಬಿ' ಅಂತಿಮ ವರದಿಯನ್ನು ಸಲ್ಲಿಸಿದ್ದು, ಮಾನ್ಯ ನ್ಯಾಯಾಲಯವು ಸದರಿ 'ಬಿ' ಅಂತಿಮ ವರದಿಯನ್ನು ಸ್ವೀಕರಿಸಿದ್ದು, ಪ್ರಕರಣವನ್ನು ಮುಕ್ತಾಯಗೊಳಿಸಲಾಗಿದೆ.		
3.	ಶ್ರೀಮತಿ ರಾಜಶ್ರೀ ಜೈನಾಪುರ, ಕೆ.ಎ.ಎಸ್(ಕಿ.ಶ್ರೇ)(ಸ್ವ.ಪ್ರ) ಅಧಿಕಾರಿ, ಸಿಆಸುಇ 107 ಕೆಇವಿ 2018	ಅಧಿಕಾರಿಯು ವಿಶೇಷ ಭೂಸ್ವಾದೀನಾಧಿಕಾರಿ, ಹಿಪ್ಪರಗಿ ಅಣೆಕಟ್ಟು ಯೋಜನೆ, ಅಥಣಿ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಆದಾಯಕ್ಕಿಂತ ಹೆಚ್ಚಿನ ಆಸ್ತಿ ಹೊಂದಿರುವ ಆರೋಪದ ಮೇಲೆ ದಿನಾಂಕ:31.03.2018 ರಂದು ಎಸಿಬಿ ಬೆಳಗಾವಿ ಠಾಣೆಯಲ್ಲಿ ಮೊ.ಸಂ.04/2018 ಅನ್ನು ದಾಖಲಿಸಿ ಸದರಿಯವರ ಕಛೇರಿ ಮತ್ತು ವಾಸದ ಮನೆಗಳನ್ನು ಶೋಧ ನಡೆಸಿದ ಪ್ರಕರಣ.	11.09.2018	07.02.2019	ಎಸಿಬಿಯಲ್ಲಿ ತನಿಖೆ ಬಾಕಿ ಇರುತ್ತದೆ.
4.	ಡಾ|| ಎಸ್.ಎಸ್. ಮಧುಕೇಶ್ವರ, ಕೆ.ಎ.ಎಸ್(ಕಿ.ಶ್ರೇ) ಅಧಿಕಾರಿ, ಸಿಆಸುಇ 139 ಕೆಇವಿ 2019	ಶ್ರೀ ಆನಂದ ಕೆ.ಗಂಗೊಳ್ಳಿ ಬಿನ್ ರಾಮ, ವಕೀಲರು, ಕುಂದಾಪುರ, ಇವರು ದಿನಾಂಕ:19.09.2019 ರಂದು ಉಡುಪಿ ಜಿಲ್ಲಾ ಭ್ರಷ್ಟಾಚಾರ ನಿಗ್ರಹ ದಳ ಪೊಲೀಸ್ ಠಾಣೆಯಲ್ಲಿ ಸಲ್ಲಿಸಿರುವ ದೂರಿನನ್ವಯ ಮೊಕದ್ದಮೆ ಸಂಖ್ಯೆ:05/2019 ದಾಖಲಿಸಿಕೊಂಡು, ಮಾನ್ಯ ಜಿಲ್ಲಾ ಮತ್ತು ಸತ್ರ (ವಿಶೇಷ) ನ್ಯಾಯಾಧೀಶರ ನ್ಯಾಯಾಲಯ, ಉಡುಪಿ ಜಿಲ್ಲೆ, ಇಲ್ಲಿ ಪ್ರಥಮ ವರ್ತಮಾನ ವರದಿ ಸಲ್ಲಿಸಿ, ಮಾನ್ಯ ನ್ಯಾಯಾಲಯದಿಂದ ಶೋಧನಾ ವಾರೆಂಟ್ ಪಡೆದು ದಿನಾಂಕ:19.09.2019 ರಂದು ಅಧಿಕಾರಿಯು ಅಧಿಕೃತವಾಗಿ	08.01.2020	06.07.2020	ಎಸಿಬಿಯಲ್ಲಿ ತನಿಖೆ ಬಾಕಿ ಇರುತ್ತದೆ.

ಕ್ರಮ ಸಂಖ್ಯೆ	ಅಧಿಕಾರಿಯ ಹೆಸರು ಮತ್ತು ಕಡತ ಸಂಖ್ಯೆ	ಪ್ರಕರಣದ ವಿವರಗಳು	ಅಮಾನತ್ತು ಪಡಿಸಿದ ದಿನಾಂಕ	ಸೇವೆಗೆ ಪುನರ್ ಸ್ಥಾಪಿಸಿದ ದಿನಾಂಕ	ಪ್ರಸ್ತುತ ಹಂತ
		ವಾಸ್ತವ್ಯವಿದ್ದ ವಸತಿಗೃಹದ ಶೋಧನೆ ನಡೆಸಲಾಗಿ, ಅಧಿಕಾರಿಯ ಅಂಗ ಶೋಧನೆಯಿಂದ ಅವರು ಹೊಂದಿದ್ದ ಪರ್ಸಿನಲ್ಲಿ ನಗದು ರೂ.53,000/-, ಸರ್ಕಾರಿ ವಸತಿಗೃಹದ ಒಳಗೆ ಆಪಾದಿತರು ಮಲಗುವ ಕೋಣೆಯಲ್ಲಿ ಮೇಜಿನ ಮೇಲಿದ್ದ ಸೂಟ್‌ಕೇಸಿನಲ್ಲಿದ್ದ ನಗದು ರೂ.75,000/- ಗಳು ಸೇರಿ ಒಟ್ಟು 1,28,000/- ನಗದು ಪತ್ತೆಯಾಗಿದ್ದಲ್ಲದೇ, ಆಪಾದಿತ ಸರ್ಕಾರಿ ಅಧಿಕಾರಿಯವರು ದಿನಾಂಕ:18.09.2019 ರಂದು ಅಕ್ರಮವಾಗಿ ಹಣ ಸಂಪಾದಿಸಿ ಕುಂದಾಪುರ ತಾಲ್ಲೂಕಿನ ಮರವಂತೆ ಗ್ರಾಮದ ಗ್ರಾಮಲೆಕ್ಕಾಧಿಕಾರಿ ಶ್ರೀ ದಿನೇಶ್ ಡಿ ಎಂಬುವರ ಮೂಲಕ ಕಳುಹಿಸಿಕೊಟ್ಟಿದ್ದ ರೂ.1,80,000/- ನಗದು ಹಣವನ್ನು ಖಚಿತ ಮಾಹಿತಿಯಂತೆ ಸದರಿಯವರಿಗೆ ಹಾಜರುಪಡಿಸಲು ಸೂಚಿಸಿ, ಗ್ರಾಮಲೆಕ್ಕಾಧಿಕಾರಿ ಶ್ರೀ ದಿನೇಶ್. ಡಿ ಇವರು ನಗದು ರೂ.1,80,000/-ಗಳನ್ನು ಹಾಜರುಪಡಿಸಿದ್ದು, ಸದರಿ ಪ್ರಕರಣದಲ್ಲಿ ಕೆಲವೊಂದು ಸ್ವತ್ತುಗಳನ್ನು ಹಾಗೂ ಒಟ್ಟು ರೂ.3,08,000/- ನಗದನ್ನು ವಶಪಡಿಸಿಕೊಂಡು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ.			
5.	ಡಾ.ಎಂ.ದಾಸೇಗೌಡ, ಕೆ.ಎ.ಎಸ್(ಹಿ.ಶ್ರೇ) ಸಿಆಸುಇ 21 ಕೆಇವಿ 2020	ಜಿಲ್ಲಾಧಿಕಾರಿ ದಕ್ಷಿಣ ಕನ್ನಡ ಜಿಲ್ಲೆ ಹಾಗೂ ವಾ & ಕೈ ಇಲಾಖೆಯಿಂದ ಸ್ವೀಕೃತವಾದ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ ಎಸಿಬಿ ದ.ಕನ್ನಡ ಜಿಲ್ಲೆ, ಮಂಗಳೂರು ಇಲ್ಲಿ ದಿನಾಂಕ:18.12.2019ರಂದು ಡಾ|| ಎಂ.ದಾಸೇಗೌಡ, ಕೆ.ಎ.ಎಸ್(ಹಿ.ಶ್ರೇ) ಅಧಿಕಾರಿ, ವಿಶೇಷ ಭೂಸ್ವಾಧೀನಾಧಿಕಾರಿ, ಕೆ.ಐ.ಎ.ಡಿ.ಬಿ, ವಲಯ ಕಚೇರಿ, ದ.ಕನ್ನಡ ಜಿಲ್ಲೆ, ಮಂಗಳೂರು, ಇವರ ವಿರುದ್ಧ ಮೊ.ಸಂ:12/2019 ಅನ್ನು ದಾಖಲಿಸಿದ್ದು ಕಚೇರಿ ಮೇಲೆ ದಾಳಿ ನಡೆಸಿ ಅದೇ ದಿನ ದಸ್ತಗಿರಿ ಮಾಡಿ, ದಿನಾಂಕ:18.12.2019 ರಿಂದ 03.01.2020ರವರೆಗೆ ನ್ಯಾಯಾಂಗÀ ಬಂಧನದಲ್ಲಿರಿಸಲಾಗಿತ್ತೆಂದು ತಿಳಿಸಲಾಗಿತ್ತು.	ದಿ:18.12.2019ರಿಂದ ಪೂರ್ವಾನ್ವಯವಾಗುವಂತೆ ದಿನಾಂಕ: 14.02.2020	09.07.2020	ಎಸಿಬಿಯಲ್ಲಿ ತನಿಖೆ ಬಾಕಿ ಇರುತ್ತದೆ.

6.	ಶ್ರೀ ಎಂ.ಎಸ್.ಎನ್ ಬಾಬು, ಕೆ.ಎ.ಎಸ್(ಕಿ.ಶ್ರೇ) ಅಧಿಕಾರಿ ಸಿಆಸುಇ 81 ಕೆಇವಿ 2020	ಆದಾಯಕ್ಕಿಂದ ಹೆಚ್ಚಿನ ಆಸ್ತಿಯನ್ನು ಹೊಂದಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಎ.ಸಿ.ಬಿ. ಯಲ್ಲಿ ಪ್ರಕರಣ ದಾಖಲಾಗಿದ್ದು, ಸದರಿಯವರ ಮನೆ ಮತ್ತು ಕಛೇರಿಯ ಮೇಲೆ ಶೋಧನ ದಾಳಿ ನಡೆಸಿರುವ ಪ್ರಕರಣ.	03.10.2020	30.04.2021.	ಎಸಿಬಿಯಲ್ಲಿ ತನಿಖೆ ಬಾಕಿ ಇರುತ್ತದೆ.
7.	ಡಾ|| ಬಿ.ಸುಧಾ, ಕೆ.ಎ.ಎಸ್(ಕಿ.ಶ್ರೇ) ಅಧಿಕಾರಿ ಸಿಆಸುಇ 89 ಕೆಇವಿ 2020	ಇವರು ಈ ಹಿಂದೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ವಿಶೇಷ ಭೂಸ್ವಾಧೀನಾಧಿಕಾರಿಯಾಗಿದ್ದ ಅವಧಿಯಲ್ಲಿ, ಸದರಿಯವರು ಕೆಂಪೇಗೌಡ ಬಡಾವಣೆ, ವಿಶ್ವೇಶ್ವರಯ್ಯ ಬಡಾವಣೆ ಹಾಗೂ ಮತ್ತಿತರ ಬಡಾವಣೆಗಳ ಸಂಬಂಧ ಸ್ವಾಧೀನ ಪಡಿಸಿಕೊಂಡಿರುವ ಜಮೀನಿನ ಮಾಲಿಕರಿಗೆ ಭೂ ಪರಿಹಾರವನ್ನು ನೀಡಲು ಎಕರೆಗೆ 5 ರಿಂದ 10 ಲಕ್ಷದವರೆಗೆ ಲಂಚÀದ ಹಣ ಪಡೆದುಕೊಳ್ಳುತ್ತಿದ್ದು, ಸದರಿ ಲಂಚದ ಹಣವನ್ನು ಪಡೆಯಲು ಶ್ರೀ ಮಣಿ ಮತ್ತು ಪ್ರವೀಣ್ ಎಂಬ ಖಾಸಗಿ ವ್ಯಕ್ತಿಗಳನ್ನು ಮತ್ತು ಇತರೆ 7-8 ಜನ ಖಾಸಗಿ ವ್ಯಕ್ತಿಗಳನ್ನು ನೇಮಕ ಮಾಡಿಕೊಂಡಿರುತ್ತಾರೆ. ಸದರಿ ವ್ಯಕ್ತಿಗಳಿಂದ ಪಡೆದ ಲಂಚದ ಹಣವನ್ನು ಅಧಿಕ ಬಡ್ಡಿ ದರಕ್ಕೆ ನೀಡುತ್ತಿದ್ದು, ಸದರಿ ಬಡ್ಡಿ ಹಣವನ್ನು ಮಣಿ ಮತ್ತು ಪ್ರವೀಣ್ ರವರು ವಸೂಲಿ ಮಾಡುತ್ತಿದ್ದು, ಬಡ್ಡಿ ಹಣದ ವ್ಯವಹಾರದಲ್ಲಿ ಸಾಲದ ಹಣ ಪಡೆದುಕೊಳ್ಳುವ ವ್ಯಕ್ತಿಗಳಿಂದ ಬ್ಲಾಂಕ್ ಚೆಕ್, ಅಗ್ರಿಮೆಂಟ್‌ಗಳನ್ನು ಪಡೆಯುತ್ತಿರುತ್ತಾರೆ. ಸದರಿ ಬಡ್ಡಿ ಹಣದ ವ್ಯವಹಾರ ಮತ್ತು ಇತರೆ ವ್ಯವಹಾರವನ್ನು ಅವರ ಗಂಡನಾದ ಶ್ರೀ ಸ್ಟೋರ್ಯಿ ಜೋಸಪ್ ಪಾಯ್ಸ್ ರವರು ನಿರ್ವಹಿಸುತ್ತಿರುತ್ತಾರೆ ಎಂಬ ಮಾಹಿತಿಯನ್ನು ಆಧರಿಸಿ ಘನ 23ನೇ ಅಡಿಷನಲ್ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯದಲ್ಲಿ ಪಿ.ಸಿ.ಆರ್. ನಂ :35/2020 ರಲ್ಲಿ ದೂರು ಸಲ್ಲಿಸಿದ್ದು, ಅದರಂತೆ ಘನ ನ್ಯಾಯಾಲಯವು ಸದರಿ ಪಿ.ಸಿ.ಆರ್. ದೂರಿನ ಮೇರೆಗೆ ಪ್ರಕರಣ ದಾಖಲಿಸಿ ತನಿಖೆ ಕೈಗೊಳ್ಳಲು ಭ್ರಷ್ಟಾಚಾರ ನಿಗ್ರಹ ದಳಕ್ಕೆ ಆದೇಶಿಸಿರುತ್ತದೆ. ಅದರನ್ವಯ ದಿನಾಂಕ:07.11.2020 ರಂದು ದಾಳಿ ನಡೆಸಿ ಸದರಿಯವರನ್ನು ಅಮಾನತ್ತು ಪಡಿಸುವಂತೆ ಎಸಿಬಿಯಿಂದ ಪ್ರಸ್ತಾವನೆ ಸ್ವೀಕೃತವಾಗಿತ್ತು.	27.11.2020	11.10.2021.	ಎಸಿಬಿಯಲ್ಲಿ ತನಿಖೆ ಬಾಕಿ ಇರುತ್ತದೆ.

8.	ಶ್ರೀ ಎಸ್.ಎನ್.ರುದ್ರೇಶ್, ಕೆ.ಎ.ಎಸ್. (ಹಿರಿಯ ಶ್ರೇಣಿ) ಅಧಿಕಾರಿ ಸಿಆಸುಇ 47 ಕೆಇವಿ 2021	ಅಧಿಕಾರಿಯವರು ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿ ಕಛೇರಿ, ಗದಗ ಹುದ್ದೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವ ಆರೋಪಕ್ಕೆ ಸಂಬಂಧಿಸಿದಂತೆ ಎ.ಸಿ.ಬಿ. ಪೊಲೀಸ್ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ:14/2020 ರಂತೆ ಪ್ರಕರಣವನ್ನು ದಾಖಲಿಸಿ ನಡೆಸಿದ ದಾಳಿ ಪ್ರಕರಣ.	ಸದರಿ ಅಧಿಕಾರಿಯವರ ಲೀನ್ ಬದಲಾದ ಕಾರಣದಿಂದ ಅಮಾನತ್ತುಗೊಳಿಸುವ ಬದಲು ಸದರಿಯವರ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸುವಂತೆ ಭ್ರಷ್ಟಾಚಾರ ನಿಗ್ರಹ ದಳವನ್ನು ಕೋರಲಾಗುತ್ತಿದೆ.
9.	ಶ್ರೀ ಎಲ್.ಸಿ.ನಾಗರಾಜ್, ಕೆ.ಎ.ಎಸ್. (ಕಿರಿಯ ಶ್ರೇಣಿ) ಅಧಿಕಾರಿ ಸಿಆಸುಇ 68 ಕೆಇವಿ 2021	ಅಧಿಕಾರಿಯವರು ಬಲ್ಲ ಆದಾಯ ಮೂಲಗಳಿಗಿಂತ ಅಧಿಕ ಆಸ್ತಿ ಹೊಂದಿರುವ ಆರೋಪಕ್ಕೆ ಸಂಬಂಧಿಸಿದಂತೆ ದಾಳಿ ನಡೆಸಿರುವ ಪ್ರಕರಣದ ಬಗ್ಗೆ.	ಸದರಿ ಪ್ರಸ್ತಾವನೆಯು ಇತ್ತೀಚಿಗೆ ಸ್ವೀಕೃತವಾಗಿದ್ದು, ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.
10.	ಶ್ರೀಮತಿ ಹೆಚ್. ಸಿ. ಗಂಗಾದೇವಿ, ಶಾಖಾಧಿಕಾರಿ, ಕರ್ನಾಟಕ ಸರ್ಕಾರ ಸಚಿವಾಲಯ	ಅಧಿಕಾರಿಯವರು ತಹಶೀಲ್ದಾರ್ ಆಗಿ ನಿಯೋಜನೆ ಮೇರೆಗೆ ಬೀದರ್ ನಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿ ಎ.ಸಿ.ಬಿ. ದಾಳಿಗೆ ಒಳಗಾಗಿದ್ದು, ಪ್ರಸ್ತುತ ಅವರ ವಿರುದ್ಧ ಶಿಸ್ತುಕ್ರಮ ಬಾಕಿ ಇರಿಸಿ ಅವರನ್ನು ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 05 ಅಕೋಇ 2021, ದಿನಾಂಕ: 30-08-2021ರಲ್ಲಿ ದಿ: 28-07-2021ರಿಂದ ಜಾರಿಗೆ ಬರುವಂತೆ ಅಮಾನತ್ತಿನಲ್ಲಿರಿಸಲಾಗಿತ್ತು.	ಕ.ನಾ.ಸೇ.(ವ.ನಿ.ಮೇ.) ನಿಯಾಮಾವಳಿಗಳು-1957ರ ನಿಯಮ 10ರ ಉಪನಿಯಮ 5(ಬಿ)ರನ್ವಯ ದಿನಾಂಕ: 28-01-2022ರಿಂದ ಅಮಾನತ್ತಿನ ಅವಧಿಯು ರದ್ದುಗೊಂಡಿರುತ್ತದೆ. ಸದರಿ ಟ್ರ್ಯಾಪ್ ಪ್ರಕರಣ ಪ್ರಸ್ತುತ ತನಿಖೆಯಲ್ಲಿದ್ದು, ಎಫ್.ಎಸ್.ಎಲ್.ವರದಿ ನಿರೀಕ್ಷಿಸಲಾಗಿದೆ ಎಂದು ಎ.ಸಿ.ಬಿ.ಯಿಂದ ತಿಳಿದು ಬಂದಿದೆ.
11.	ಶ್ರೀಮತಿ ಅಂಬುಜ ಆರ್. ಪತ್ರಾಂಕಿತ ಆಪ್ತ ಸಹಾಯಕರು, ಕರ್ನಾಟಕ ಸರ್ಕಾರ ಸಚಿವಾಲಯ	ಅಧಿಕಾರಿಯವರು ತಹಶೀಲ್ದಾರ್ ಆಗಿ ನಿಯೋಜನೆ ಮೇರೆಗೆ ಶೃಂಗೇರಿ ತಾಲ್ಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿ ಎ.ಸಿ.ಬಿ. ಟ್ರ್ಯಾಪ್ ಪ್ರಕರಣದಲ್ಲಿ ದಸ್ತಗಿರಿಯಾಗಿರುತ್ತಾರೆ.	ಪ್ರಸ್ತುತ ಅವರ ವಿರುದ್ಧ ಶಿಸ್ತುಕ್ರಮ ಬಾಕಿ ಇರಿಸಿ ಅವರನ್ನು ಸರ್ಕಾರದ ಆದೇಶ ಸಂಖ್ಯೆ: ಕಂಇ 10 ಎಡಿಇ 2022, ದಿನಾಂಕ: 31-01-2022ರಲ್ಲಿ ದಿ:07-01-2022 ರಿಂದ ಜಾರಿಗೆ ಬರುವಂತೆ ಅಮಾನತ್ತಿನಲ್ಲಿ ಇರಿಸಲಾಗಿದೆ.

****